Nagarjuna Degree College
38/36, Ramagondanahalli,
Yelahanka Hobli,
Bengaluru - 560 064.

14302

Reg. No.

## III Semester B.B.A./B.B.A.M. Degree Examination, March/April - 2022

## ಕನ್ನಡ ಭಾಷೆ

## ಸುವರ್ಣ ಸಂಪದ

**(CBCS Scheme Repeaters)**

**Paper : III**

**Time : 3 Hours** **Maximum Marks : 70**

I. ಅ) **ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ. **(1×6=6)**

1) ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆವೆನಯ್ಯಾ
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಲ್ಲ
ಹಡಕೆಗೆ ಮೆಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ ?

2) ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ।
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲೆದಪೆಯಣ್ಣ ಸೂಟ್ಟಿಡೆಯಲಪ್ಪುದು ಕಾಣಮಹಾಜಿರಂಗದೊಳ್॥

ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ. **(2×2=4)**

1) ಚಂಪೂ
2) ಬಸವಣ್ಣ
3) ರಾಘವಾಂಕ
4) ರಗಳೆ

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಕಣ್ಣಪ್ಪನ ಮುಗ್ಧಭಕ್ತಿಯ ಪರಾಕಾಷ್ಠೆ ರಗಳೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.
2) 'ವಸಿಷ್ಠ - ವಿಶ್ವಾಮಿತ್ರರ' ಸಂಭಾಷಣೆಯನ್ನು ವಿವರಿಸಿ.

[P.T.O.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. (2×5=10)

1) ರಿಲಯನ್ಸ್ ಕಂಪನಿ, ಅನಿಲ ಉತ್ಪಾದನೆಯ ವ್ಯವಹಾರದಲ್ಲಿ ಎಸಗಿದ ಮೋಸ

2) ಮಹಿಳಾ ಉದ್ಯೋಗದಲ್ಲಿ ಪಿತೃಪ್ರಧಾನ ವ್ಯವಸ್ಥೆಯ ನಿಯಂತ್ರಣ.

3) ತಂತ್ರಜ್ಞಾನದ ಸ್ವರೂಪದ ಬಗೆಗಿರುವ ತಪ್ಪು ಗ್ರಹಿಕೆಗಳು

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಮಹಿಳಾ ಉದ್ಯಮದ ಯಶಸ್ಸು ಮಹಿಳೆಯರ ಬದುಕನ್ನು ಉತ್ತಮಗೊಳಿಸುತ್ತಿಲ್ಲವೇಕೆ ? ಚರ್ಚಿಸಿ.

2) ಸಂವಹನ ಭಾಷೆಯಾಗಿ ಕನ್ನಡಕ್ಕಿರುವ ಸವಾಲುಗಳೇನು ? ವಿವರಿಸಿ.

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತ ಉತ್ತರಿಸಿ. (1×5=5)

1) 'ಲಿಖಿತ ಜಾನಪದ' ಎಂದರೇನು ?

2) ಬ್ಲಾಗುಗಳ ಪರ-ವಿರೋಧ ನೆಲೆಗಳಾವುವು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) 'ಸಿನಿಮಾ – ಒಂದು ಆಧುನಿಕ ಜನಪದ ಕಲೆ' – ಎಂಬುದಕ್ಕೆ ಡಾ. ಬರಗೂರು ರಾಮಚಂದ್ರಪ್ಪನವರು ನೀಡಿರುವ ವಿವರಗಳೇನು ?

2) ನಮ್ಮ ದೇಶದಲ್ಲಿ ಬೇರೂರಿರುವ ಮೂಢನಂಬಿಕೆಗಳೇನು ? ಚರ್ಚಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಆನ್‌ಲೈನ್ ಮಾರುಕಟ್ಟೆಯ ಬಗೆಗೆ ಗ್ರಾಹಕರ ಜವಾಬ್ದಾರಿಗಳೇನು ?

2) ಟಿ.ಆರ್.ಪಿ. ಎಂದರೇನು ? ಅದರ ಮಾನದಂಡಗಳಾವುವು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಆನ್‌ಲೈನ್ ಮಾರುಕಟ್ಟೆಯ ಅನುಕೂಲತೆ – ಅನಾನುಕೂಲತೆಗಳನ್ನು ಚರ್ಚಿಸಿ.

2) ಸ್ವಂತ ಪ್ರತಿಭೆಯಿಂದ ದೊಡ್ಡ ಉದ್ಯಮಿಯಾದ ಶರತ್ ಬಾಬುವಿನ ಸಾಹಸಗಾಥೆಯನ್ನು ಬರೆಯಿರಿ.